ನಿನ್ನಜ್ಜಿ ಜೊತೆ ಕಳೆದಿರುವಷ್ಟು ಸಮಯವನ್ನು ನೀನು ಕಳೆದಿಲ್ಲ. ಅದರಲ್ಲೂ ನನ್ನ ನಿನ್ನಜ್ಜಿಯ ಅನುಬಂಧವೇ ಬೇರೆ. ಈ ಪೆನ್ನು ಅವಳು ನನ್ನ ಬದುಕಿಗೆ ಬರೋ ಮೊದಲೂ ಇತ್ತು, ಅವಳು ಬದುಕಿನಲ್ಲಿ ಜೊತೆ ಜೊತೆಯಾದಾಗಲೂ ಇತ್ತು, ಬದುಕಿನಿಂದ ಹೋದ ಮೇಲೂ ಇದೆ. ಒಂದು ರೀತಿ ಅವಳು ನನ್ನ ಬದುಕಿಗೆ ಬರೋಕೆ ಈ ಪೆನ್ನೂ ಒಂದು ರೀತಿ ಕಾರಣ' ಎಂದರು. 'ಏನಜ್ಜಾ ಅರ್ಥವಾಗದ ಏನೇನೋ ಹೇಳ್ತಿದೀಯ' ಅಂತ ಕೇಳಿದ್ದಕ್ಕೆ ಅಜ್ಜ 'ಇವತ್ತು ಬೇಡ ನಾಳೆ ನಾನೂ ನೀನೂ ವಾಕಿಂಗ್ ಹೋಗೋಣ ಆವಾಗ ಎಲ್ಲ ಹೇಳ್ತೀನಿ' ಅಂದ್ರು. ನಾನು ಮಾರನೆ ದಿನ ಯಾವಾಗ ಬರುತ್ತೋ ಅಂತ ಕಾಯ್ತಿದ್ದ. ಅವತ್ತು ಅಜ್ಜ ಹೇಳಿದ್ದು ಹೀಗೆ.

'ನಾನು ಓದು ಮುಗಿಸಿ ಕೆಲಸಕ್ಕೆ ಸೇರಿ ಪಡೆದ ಮೊದಲ ಸಂಬಳದಲ್ಲಿ ಕೊಂಡದ್ದು ಈ ಪೆನ್ನು. ಒಂದು ಒಳ್ಳೆ ಪೆನ್ನು ಇಟ್ಕೊ ಬೇಕು ಅನಿಸಿದಾಗ ಅಂಗಡಿಗೆ ಹೋಗಿ ಒಂದು ಒಳ್ಳೆ ಪೆನ್ನು ಕೊಡಪ್ಪ ಅಂದೆ. ಅವನು ಕೊಟ್ಟದ್ದು ನಾನು ತಗೊಂಡಿದ್ದು ಅಷ್ಟೆ. ಆದರೆ ಅದೇನೋ ಈ ಪೆನ್ನಿನಿಂದ ಯಾವ ಕೆಲಸ ಮಾಡಿದರೂ ಅದು ಯಶಸ್ಸು ಅನ್ನೋ ನಂಬಿಕೆ ಬಂದುಬಿಡ್ತು. ನಾನು ಯಾವತ್ತೂ ಈ ಪೆನ್ನು ಶರ್ಟ್‌ನ ಜೋಬಿಗೆ ಸಿಕ್ಕಿಸದೆ ಆಚೆ ಹೋಗುತ್ತಲೇ ಇರಲಿಲ್ಲ. ಕಡೆಗೆ ದೇವಸ್ಥಾನಕ್ಕೆ ಅಂತ ಹೋದರೂ ಪೆನ್ನು ನನ್ನ ಶರ್ಟ್ ಜೋಬಿಲ್ಲಿರುತ್ತಿತ್ತು. ಅದನ್ನು ಕಂಡ ಕೆಲವರು ರೇಗಿಸಿದ್ದಕ್ಕೆ ಹೌದಪ್ಪಾ ಒಂದು ವೇಳೆ ದೇವರು ನನ್ನ ಆಟೋಗ್ರಾಫ್ ಕೇಳಿದರೆ ಬೇಕಲ್ಲ ಅಂತ ತಮಾಷೆ ಮಾಡುತ್ತಿದ್ದೆ. ಒಂದು ದಿನ ಯಾರೋ ಒಬ್ಬ ಸ್ವಲ್ಪ ಪೆನ್ನು ಕೊಡ್ತೀರಾ ಅಂತ ಕೇಳಿದ. ಕೊಟ್ಟೆ ಅವನು ಹಿಂದಿರುಗಿಸಿದ ಮೇಲೆ ಯಾಕೋ ಪೆನ್ನು ಎಂದಿನಂತಿಲ್ಲ ಅನಿಸಿತು. ಅದಕ್ಕೇ ಅಂದಿನಿಂದ ನಾನು ಎರಡು ಪೆನ್ನು ಇಟ್ಕೋತಿದ್ದೆ. ಒಂದು ಪೆನ್ನು ನಾನು ಮಾತ್ರ ಬರೆಯೋದಕ್ಕೆ, ಅದನ್ನು ಯಾರಿಗೂ ಕೊಡುತ್ತಿರಲಿಲ್ಲ. ಇನ್ನೊಂದು ಯಾರಾದರೂ ಕೇಳಿದರೆ ಕೊಡೋಕೆ ಅಂತ.

ಒಂದು ದಿನ ನಾನು ಬ್ಯಾಂಕಿಗೆ ಹೋಗಿದ್ದೆ. ಅಲ್ಲಿ ಚೆಕ್ಕು ಬರೆಯುತ್ತಿದ್ದೆ. ಪಕ್ಕದಲ್ಲಿ ನಿಂತಿದ್ದ ಹುಡುಗಿಯೊಬ್ಬಳು ಸ್ವಲ್ಪ ಪೆನ್ನು ಕೊಡ್ತೀರಾ ಅಂತ ಕೇಳಿದಳು. ಆ ಇನ್ನೊಂದು ಪೆನ್ನು ಅವತ್ತು ಇರಲಿಲ್ಲ. ಹೀಗಾಗಿ ಇದೇ ಪೆನ್ನನ್ನು ಕೊಡಬೇಕಾಗಿ ಬಂತು. ಯಾಕೋ ಆ ಹುಡುಗಿಯನ್ನು ನೋಡಿದರೆ ಪೆನ್ನು ಕೊಡೋಲ್ಲ ಅಂತ ಹೇಳೋಕೆ ಮನಸ್ಸು ಬರಲಿಲ್ಲ. ಕೊಟ್ಟೆ. ಅವಳು ಚಲನ್ ಬರೆಯುತ್ತಿದ್ದಳು. ನನ್ನನ್ನು ಮ್ಯಾನೇಜರ್ ಕರೆದರು ಹೋದೆ. ಹಿಂದಿರುಗಿ ಬರೋಷ್ಟರಲ್ಲಿ ಆ ಹುಡುಗಿ ಇರಲಿಲ್ಲ. ಅರೆ ನನ್ನ ಪೆನ್ನು? ಅವಳನ್ನು ಅಲ್ಲೆಲ್ಲ ಹುಡುಕಿದೆ. ಬ್ಯಾಂಕಿನವರನ್ನು ಕೇಳಿದೆ. ಬೆಳಗಿಂದ ಸುಮಾರು ಹುಡುಗಿಯರು ಬಂದಿದಾರೆ, ನೀವು ಕೇಳ್ತಿರೋ ಹುಡುಗಿ ಯಾರು ಅಂತ ನನ್ನನ್ನೇ ಕೇಳಿದರು. ಅಯ್ಯೋ ಇನ್ನು ಹೇಗಪ್ಪಾ ಅವಳನ್ನು ಹುಡುಕೋದು ಅಂತ ಮತ್ತೆ ಮ್ಯಾನೇಜರ್ ಕೋಣೆಗೆ ಹೋಗಿ ನನ್ನ ತಾಪತ್ರಯ ತಿಳಿಸಿದೆ. ನೋಡಿ ಅಷ್ಟೆಲ್ಲ ಕಷ್ಟ ಯಾಕೆ ನಾನು ನಿಮಗೆ ಇನ್ನೊಂದು ಪೆನ್ನು ಕೊಡ್ತೀನಿ ಅಂದ್ರು. ಅದು ಹಾಗಲ್ಲ ಅದರಲ್ಲಿ ನನ್ನ ಹೃದಯವೇ ಇದೆ ಅಂದೆ. ಮ್ಯಾನೇಜರ್ ನಕ್ಕು ಹಾಗಾದರೆ ಆ ಹುಡುಗಿ ನಿಮ್ಮ ಹೃದಯ ಕದ್ದಿದ್ದಾಳೆ ಅಂದರು.

ನಾನು ಪಟ್ಟು ಬಿಡಲಿಲ್ಲ ಅವತ್ತು ನಾನು ಬ್ಯಾಂಕಿಗೆ ಹೋದ ಸಮಯಕ್ಕೆ ಯಾರ್ಯಾರು ಬಂದಿದ್ದರು ಅಂತ ಎಲ್ಲಾ ಚಲನ್‌ಗಳನ್ನೂ ನೋಡಿದೆ. ಒಂದು ಚಲನ್ ನೋಡಿದಾಗ ಹೌದು ಇದು ನನ್ನ ಪೆನ್ನಿನಿಂದಲೇ ಬರೆದಿರೋದು ಅಂತ ಖಚಿತವಾಗಿ ಆ ಹುಡುಗಿಯ ಅಕೌಂಟ್ ಸಂಖ್ಯೆಯ ಅನುಸಾರ ಅವಳ ಮನೆಯ ಅಡ್ರೆಸ್ಸು ಫೋನ್ ನಂಬರು ಪತ್ತೆ ಮಾಡಿದೆ. ಕೂಡಲೇ ಅಲ್ಲಿಗೆ ಹೋದೆ. ಅಷ್ಟು ಹೊತ್ತಿಗೆ ಆ ಹುಡುಗಿ ಮನೆಗೆ ಬಂದಿದ್ದಳು. ನಾನು ಪೆನ್ನಿನ ವಿಚಾರ ಕೇಳಿದೆ. ಅದಕ್ಕೆ ಅವಳು ಹೌದು ನಾನು ನಿಮಗೆ ಪೆನ್ನು ಹಿಂದಿರುಗಿಸಬೇಕು ಅಂತ ನಿಮ್ಮನ್ನು ಹುಡುಕಿದೆ, ಕಾಣಲಿಲ್ಲ. ಹೀಗಾಗಿ ನಿಮ್ಮ ಪೆನ್ನು ನಾನೇ ಇಟ್ಕೊಂಬಿಟ್ಟೆ, ತಗೊಳಿ ನಿಮ್ಮ ಪೆನ್ನು ಅಂದು ಕೊಟ್ಟಳು. ನಾನು ಥ್ಯಾಂಕ್ಸ್ ಅಂದು ಹೊರ ಬರೋದರಲ್ಲಿದ್ದಾಗ ಹೇಗೂ ಇಷ್ಟು ದೂರ ಬಂದಿದೀರ ನೋಡಿದರೆ ಗಾಬರಿಯಾಗಿದೀರ ಕಾಫಿ ಕೊಡ್ತೀನಿ ಕುಡ್ಕೊಂಡು ಹೋಗಿ ಅಂದಳು. ಕೂತೆ. ಕಾಫಿ ಕೊಟ್ಟು ಯಾಕೆ ಒಂದು ಪೆನ್ನು ವಿಚಾರಕ್ಕೆ ಇಷ್ಟೊಂದು ಗಾಬರಿ ಮಾಡ್ಕೊಂಡು ಬಂದ್ರಿ ಅಂತ ಕೇಳಿದಳು. ಹಾಗೆ ನನ್ನ ಹೆಸರು, ಎಲ್ಲಿ ಕೆಲಸ, ಎಲ್ಲಿ ಮನೆ ಇತ್ಯಾದಿಗಳನ್ನು ಕೇಳಿದಳು. ನಾನೂ ಅವಳ ಬಗೆಗೆ ವಿಚಾರಿಸಿದೆ. ಅವಳ ತಂದೆ ತಾಯಿಯರನ್ನು ಪರಿಚಯಿಸಿದಳು. ಅವಳ ತಂದೆ ನನಗೆ ನಿಮ್ಮ ಆತಂಕ ಅರ್ಥ ಆಗುತ್ತೆ ಕಳ್ಕೊಳೋದು ಸುಲಭ ಪಡ್ಕೊಳೋದು ಕಷ್ಟ ಅಂದರು.

ಅಲ್ಲಿಗೆ ನನ್ನ ಆ ಹುಡುಗಿಯ ಸಂಪರ್ಕ ಮುಗಿಯಿತು. ಇದೆಲ್ಲ ಆಗಿ ಸುಮಾರು ಆರು ತಿಂಗಳಾಗಿರಬಹುದು. ಒಂದು ದಿನ ಹೋಟೆಲಿನಲ್ಲಿ ಕಾಫಿಗೆ ಅಂತ ಹೋದೆ. ಅಲ್ಲಿ ಆ ಹುಡುಗಿಯೂ ಇದ್ದಳು. ನನ್ನ ನೋಡಿ ಅವಳಿಗೆ ತಮಾಷೆ ಮಾಡಬೇಕು ಅನಿಸಿರಬೇಕು. ಹತ್ತಿರ ಬಂದು 'ಸ್ವಲ್ಪ ನಿಮ್ಮ ಪೆನ್ನು ಕೊಡ್ತೀರಾ' ಅಂತ ಕೇಳಿ ನಕ್ಕಳು. 'ಓ ನೀವಾ?' ಅಂದು ನಾನು ಅವಳಿಗೆ ಇಟ್ಕೊಂಡಿದ್ದ ಇನ್ನೊಂದು ಪೆನ್ನು ಕೊಟ್ಟೆ. ಅವಳು ನಕ್ಕು ಇದಲ್ಲ, ಅವತ್ತು ಕೊಟ್ಟಿದ್ರಲ್ಲ ಅದು ಅಂದಳು. ವಿಧಿಯಿಲ್ಲದೇ, ಅವಳಿಗೆ ಇಲ್ಲ ಅನ್ನಲಾರದೇ ನನ್ನ ಪೆನ್ನನ್ನೇ ಕೊಟ್ಟೆ. ನನ್ನ ಟೇಬಲ್ ಮುಂದೆಯೇ ಬಗ್ಗಿ ಚೀಟೀಲಿ ಅದೇನೇನೋ ಬರ್ಕೊಂಡು ಪೆನ್ನು ಹಿಂದಿರುಗಿಸಿ ಥ್ಯಾಂಕ್ಸ್ ಅಂದಳು. ಅವಳು ಹೊರಟ ಎಷ್ಟೋ ಹೊತ್ತಿನ ನಂತರ ನಾನು ಹೊರಟಾಗ ಹೋಟೆಲಿನ ಹುಡುಗ ಬಿಲ್ ಕೊಟ್ಟ ಜೊತೆಗೆ ಒಂದು ಚೀಟಿನೂ ಕೊಟ್ಟು ಸರ್ ಆ ಮೇಡಂ ನಿಮಗೆ ಕೊಟ್ಟರು ಅಂದ. ನೋಡಿದೆ. 'ಇಷ್ಟ ಇದ್ದರೆ ನಮ್ಮನೆಗೆ ಬಂದು ನಮ್ಮಪ್ಪನ ಹತ್ತಿರ ಮಾತಾಡಿ' ಅಂತ ಬರೆದಿದ್ದಳು. ಅದು ನನಗೆ ಬಂದ ಪ್ರಥಮ ಪ್ರೇಮ ಪತ್ರ ಅದೂ ನನ್ನ ಪೆನ್ನಿಂದಲೇ ಬರೆದದ್ದು. ನನ್ನ ಪೆನ್ನು ನನ್ನ ಭವಿಷ್ಯದ ತಿರುವನ್ನು ಸೂಚಿಸುತ್ತಿತ್ತು.

ಎರಡು ದಿನ ಬಿಟ್ಟು ಅವರ ಮನೆಗೆ ಹೋದೆ. ಅವರ ತಂದೆ ಜೊತೆ ಮಾತಾಡಿದೆ. ಯೋಗ ಇತ್ತು ಮದುವೆ ಆಯಿತು. ಮದುವೆಗೆ ಎರಡು ತಿಂಗಳು ಸಮಯ ಇತ್ತು. ಆಗಾಗ ಫೋನ್ ಮಾಡ್ತಿರಿ ಅಂತ ಅವಳು ಅಂದಿದ್ದಕ್ಕೆ ಇಲ್ಲ ಕಾಗದ ಬರೀತೀನಿ ಅಂದೆ. ನಿಜ ನಾನು ಅವಳಿಗೆ ಹದಿನಾರು ಕಾಗದ ಬರೆದಿದ್ದೆ. ಅದೂ ಇದೇ ಪೆನ್ನಿನಿಂದ. ಒಂದೇ ಊರಿನಲ್ಲಿ ಒಂದೇ ಬಡಾವಣೆಯಲ್ಲಿದ್ದರೂ ಪರಸ್ಪರ ಪ್ರೇಮ ಪತ್ರ ಬರೆದು ಓದಿ ಸುಖಿಸಿದವರು ನಾವು. ನಿನ್ನಜ್ಜಿ ಮದುವೆಯಾಗಿ ನನ್ನ ಮನೆಗೆ ಬಂದ ಮೇಲೆ ಅವಳೂ ಕಾಗದ ಬರೆಯಲು ಉಪಯೋಗಿಸುತ್ತಿದ್ದುದು ಈ ಪೆನ್ನನ್ನೇ. ನಿನ್ನಪ್ಪ, ದೊಡ್ಡಪ್ಪ, ಅತ್ತೆ ಅಲ್ಲ ಹುಟ್ಟೋ ಸಮಾಚಾರನ ಅವಳು ಅವರಮ್ಮನಿಗೆ ಇದೇ ಪೆನ್ನಿನಿಂದ ಬರೆದು ತಿಳಿಸಿದ್ದಳು. ಇದು ಇಷ್ಟು ವರ್ಷದ ಪೆನ್ನಾದರೂ ಒಂದು ದಿನವೂ ಇದರ ನಾಲಿಗೆ ಬದಲಿಸಿಲ್ಲ. ಬರವಣಿಗೆ ಚೆನ್ನಾಗಿರಬೇಕಾದರೆ ಪೆನ್ನಿನ ನಾಲಿಗೆ ಚೆನ್ನಾಗಿರಬೇಕು, ಬದುಕು ಚೆನ್ನಾಗಿರಬೇಕಾದರೆ ಮನುಜನ ನಾಲಿಗೆ ಚೆನ್ನಾಗಿರಬೇಕು ಎನ್ನೋದು ನನ್ನ ಅನಿಸಿಕೆ. ಈ ಪೆನ್ನು ನನ್ನ ಸುಖದಲ್ಲಿ ಮಾತ್ರ ಪಾಲ್ಗೊಂಡಿಲ್ಲ ನನ್ನ ದುಃಖದಲ್ಲೂ ಪಾಲ್ಗೊಂಡಿದೆ. ನಿನ್ನಜ್ಜಿಯನ್ನು ಯಾವುದೋ ಕಾಯಿಲೆ ಎಂದು ಆಸ್ಪತ್ರೆಗೆ ಸೇರಿಸಬೇಕಾಗಿ ಬಂದಾಗ ಅಲ್ಲಿನ ಫಾರಂಗಳನ್ನು, ತುಂಬಲು, ಅಜ್ಜಿಗೆ ಆಪರೇಷನ್ ಆಗಬೇಕಾದಾಗ ಸಂಬಂಧಪಟ್ಟ ಕಾಗದ ಪತ್ರಗಳಿಗೂ ಇದೇ ಪೆನ್ನಿನಿಂದ ಸಹಿ ಮಾಡಿದ್ದೆ. ನನಗೆ ಒಂದು ನಂಬಿಕೆ ಏನಪ್ಪಾ ಎಂದರೆ ಈ ಪೆನ್ನಿನಿಂದ ಏನು ಬರೆದರೂ ಅದರಿಂದ ಒಳ್ಳೇದೇ ಆಗುತ್ತೆ, ಸುಖದಲ್ಲಿ ಕೊನೆಗೊಳ್ಳುತ್ತೆ ಅಂತ. ಹೀಗಾಗಿ ಈ ಪೆನ್ನಿಗೂ ನನಗೂ ನನ್ನ ಬದುಕಿಗೂ ಅವಿನಾಭಾವ ಸಂಬಂಧ. ಈ ಪೆನ್ನನ್ನು ನಾನು ಒಂದು ದಿನವೂ ಅಲ್ಲಿ ಇಲ್ಲಿ ಬಿಟ್ಟು ಕಳೆದುಕೊಂಡಿಲ್ಲ. ಅವತ್ತು ನಿನ್ನ ಅಜ್ಜಿಗೆ ಬರೆಯೋದಕ್ಕೆ ಕೊಟ್ಟಿದ್ದು ಬಿಟ್ಟರೆ ಇನ್ಯಾರಿಗೂ ಬರೆಯೋದಕ್ಕೆ ಹೋಗಲಿ ಮುಟ್ಟೋದಕ್ಕೂ ಬಿಟ್ಟಿಲ್ಲ. ಅವರು ಏನು ಮಾಡಿಬಿಡುತ್ತಾರೋ ಎಂಬ ಭಯ, ಆತಂಕ.

ಏನೇನಾಗಬೇಕು ಅಂತಿದೆಯೋ ಅದು ಆಗೇ ಆಗುತ್ತೆ. ನಿನ್ನಜ್ಜಿ ನಮ್ಮನ್ನೆಲ್ಲಾ ಬಿಟ್ಟು ಹೋದಾಗ, ಅವಳ ಸಾವಿನ ಸರ್ಟಿಫಿಕೇಟ್ ಪಡೆಯಲು ಇದೇ ಪೆನ್ನಿನಿಂದ ಅರ್ಜಿ ಬರೆದು ಕೊಟ್ಟಿದ್ದೆ. ಅವರು ಸರ್ಟಿಫಿಕೇಟ್ ಕೊಟ್ಟಾಗಲೂ ಇದೇ ಪೆನ್ನಿನಿಂದ ಸಹಿ ಮಾಡಿ ಪಡೆದುಕೊಂಡಿದ್ದೆ. ನಾನು ಇರುವಷ್ಟು ದಿನ ಇದು ನನ್ನಲ್ಲಿ ಜೋಪಾನವಾಗಿರಬೇಕು. ಇದು ನನ್ನಲ್ಲಿದ್ದರೆ ನಿನ್ನಜ್ಜಿ ನನ್ನ ಬಳಿಯೇ ಇದಾಳೆ ಅನಿಸುತ್ತೆ, ಪೆನ್ನು ಕೈಲಿ ಹಿಡಿದಿದ್ದರೆ ನಿಮ್ಮಜ್ಜಿ ಕೈ ಹಿಡಿದಿದೀನಿ ಎನಿಸುತ್ತೆ. ನನಗೆ ನಾನೇ ಏನಾದರೂ ಮಾತಾಡಿಕೊಂಡರೆ ನಿನ್ನಜ್ಜಿ ಜೊತೆ ಮಾತಾಡ್ತಾ ಇದೀನಿ ಅನಿಸುತ್ತೆ'.

ಅಜ್ಜನ ಮಾತು ಮುಗಿದಾಗ ಮೊಮ್ಮಗನ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ಅಜ್ಜನ ಪೆನ್ನು ಒಂದು ಸಾರಿ ಸವರಿ 'ಅಜ್ಜೀ ನೀನು ಹೇಗಿದೀಯಾ' ಅಂತ ಮನಸಿನಲ್ಲೇ ಕೇಳಿದ. ಮೈ ಜುಂ ಎಂದ ಹಾಗಾಯಿತು. ನಾವು ಅಜ್ಜನನ್ನು ಜೋಪಾನವಾಗಿ ನೋಡ್ಕೊಳೋ ಹಾಗೆ ಅಜ್ಜನ ಈ ಪೆನ್ನನ್ನೂ ಜೋಪಾನವಾಗಿ ನೋಡ್ಕೊಬೇಕು ಎನಿಸಿತು.

■